# ಸುರಂಗ ಮಥನ


ಗುಹೆಯಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಮಕ್ಕಳು

**ಧಾರಾಕಾರ ಮಳೆಯಿಂದ ನೀರು ತುಂಬಿದ ಇಕ್ಕಟ್ಟಾದ ಗುಹೆಯಲ್ಲಿ, 18 ದಿನಗಳ ಕಾಲ ಸಿಕ್ಕಿಬಿದ್ದ ಫುಟ್‌ಬಾಲ್ ಕೋಚ್ ಮತ್ತು 12 ಬಾಲಕರನ್ನು ಹೊರಕರೆತಂದ ಕಾರ್ಯಾಚರಣೆ ಪಡೆಯ ಸಾಹಸ, ಯಾವ ಹಾಲಿವುಡ್ ಸಿನಿಮಾದ ದೃಶ್ಯಗಳಿಗೂ ಕಡಿಮೆ ಇರಲಿಲ್ಲ.**

■ **ಸರೋಜಾ ಪ್ರಕಾಶ**

'ಹಸಿವು, ಹಸಿವು, ಹಸಿವು.. ನಮಗೆ ತಿನ್ನಲು ಕೊಡಿ...' ಹುಡುಗನ ಕರುಳು ಕಿವುಚುವಂಥ ನುಡಿಗಳು. ಜೊತೆಗೆ ಎದೆಮಟ್ಟದ ನೀರಿನ ಪಕ್ಕದ ಅಂಟು ಮಣ್ಣಿನ ದಿಬ್ಬದ ಮೇಲಿನ ಕಪ್ಪುಕತ್ತಲಿನ ಇಕ್ಕಟ್ಟು ಜಾಗದಲ್ಲಿ ಒತ್ತಿ ಕುಳಿತಿರುವ ಹದಿಮೂರು ಬಾಲಕರ ಭಯಾನಕ ಸ್ಥಿತಿಯ ವಿಡಿಯೋ ತುಣುಕು ಇಡೀ ಜಗತ್ತನ್ನೇ ತಲ್ಲಣಗೊಳಿಸಿತ್ತು.

ಉತ್ತರ ಥಾಯ್ಲ್ಯಾಂಡಿನ ಚಿಯಾಂಗ್ ರೈ ಪ್ರಾಂತ್ಯಕ್ಕೆ ಸೇರಿದ ಥಾಮ್ ಲುವಾಂಗ್ ಗುಹೆಯಲ್ಲಿ ಸಿಕ್ಕಿಹಾಕಿಕೊಂಡ ಹನ್ನೆರಡು ಬಾಲಕರು ಎಲ್ಲರೂ 11–16 ವರ್ಷದೊಳಗಿನ ಸ್ಥಳೀಯ ಮು ಪಾ ಸಾಕರ್ (ಫುಟ್‌ಬಾಲ್) ತಂಡದ ಆಟಗಾರರು. ಜೊತೆಗೆ 26 ವರ್ಷದ ತಂಡದ ಕೋಚ್. ನಾಪತ್ತೆಯಾಗಿ ಏಳೆಂಟು ದಿನ ಹುಡುಕಿದರೂ ಸುಳಿವು ಸಿಕ್ಕಿರಲಿಲ್ಲ.

'ಥಾಯಿ ಸುರಂಗದಲ್ಲಿ ಸಿಕ್ಕಿ ಬಿದ್ದ ಹದಿಮೂರೂ ಬಾಲಕರು ಪತ್ತೆಯಾಗಿದ್ದಾರೆ, ಸುರಕ್ಷಿತವಾಗಿದ್ದಾರೆ' ಜುಲೈ 7 ರಂದು ಬಿಬಿಸಿಯ ಜೋನಾಥನ್ ಹೆಡ್ ಕಳಿಸಿದ ಸಂದೇಶ ಜಗತ್ತಿನಾದ್ಯಂತ ಸಂತಸದ ಹೊನಲನ್ನು ಹರಿಸಿತ್ತು. ಒಂಭತ್ತು ದಿನಗಳ ಹಗಲು ರಾತ್ರಿ ಹುಡುಕಾಟ ಅಂದು ಅಂತ್ಯಗೊಂಡಿತ್ತು. ಆದರೆ ಅವರನ್ನು ಸುರಕ್ಷಿತವಾಗಿ ಹೊರತರುವ ಬಗೆ ಹೇಗೆಂಬ ಆತಂಕ ಸನ್ನಿಹಿತವಾಗಿತ್ತು.

ಮ್ಯಾನ್ಮಾರ್ ಮತ್ತು ಥಾಯ್ಲ್ಯಾಂಡಿನ ನಡುವಿನ ಊರು ಈ ಮೇಸ್ತೈ. ಅಲ್ಲಿಯ ಫುಟ್‌ಬಾಲ್ ತಂಡ ಮು ಪಾರ್; ಆ ಶಬ್ದದ ಅರ್ಥ ಕಾಡು ಹಂದಿ.

ಜೂನ್ 30, ಶನಿವಾರ. ಆಟವಾಡಿ ಮನೆಗೆ ಹೊರಟ ಬಾಲಕರನ್ನು 'ಇವತ್ತೊಂದು ವಿಶೇಷ ಜಾಗವನ್ನು ತೋರಿಸುತ್ತೇನೆ, ಬನ್ನಿ..' ಎಂದ ತರಬೇತುದಾರ ಎಕ್ಕಪೊಲ್. ಆತನೇನೂ ಮಹಾ ವಯಸ್ಸಾದವನಲ್ಲ. ಬರೀ ಇಪ್ಪತ್ತಾರು ವರ್ಷದವನು. ಹದಿಹರೆಯದ ಹನ್ನೆರಡೂ ಮಕ್ಕಳು ಬೈಸಿಕಲ್‌ನಲ್ಲಿ ಗುರುವನ್ನು ಹಿಂಬಾಲಿಸಿದ್ದರು. ಅದು ಥಾಮ್ ಲುವಾಂಗ್ ಎಂಬ ಸುರಂಗ. ಕುತೂಹಲದಿಂದ ಕತ್ತಲೆಯ ಗವಿಯೊಳಗೆ ಎಲ್ಲರೂ ನುಗ್ಗಿ ಮುಂದೆ ಮುಂದೆ ಹೋಗುತ್ತಿರುವಾಗ ಎಲ್ಲಿಂದಲೋ ನೀರು ನುಗ್ಗಿದೆ. ನೀರಿನ ಹರಿವನ್ನು ದಾಟಿ ಆ ಕಡೆ ಈ ಕಡೆ ಓಡಾಡಿದರು, ಆದರೆ ನೀರು ರಭಸಗೊಳ್ಳುತ್ತಲೇ ಹೋಯಿತು. ಭಯಭೀತ ತಂಡ ತಪ್ಪಿಸಿಕೊಳ್ಳುತ್ತ ಸುರಕ್ಷಿತ ಜಾಗ ಹುಡುಕುತ್ತ ಕೆಸರು ನೀರಿನ ರಭಸದ ಜೊತೆ ಮುಂದೆ ಸಾಗಿತು. ಹೊತ್ತು, ದಿನ ಸವೆದಿದ್ದೂ ಗೊತ್ತಾಗಲಿಲ್ಲ.

ರಾಷ್ಟ್ರೀಯ ಉದ್ಯಾನದ ಸಿಬ್ಬಂದಿಯೊಬ್ಬ ಗುಹೆಯ ಹೊರಗೆ ಒರಗಿಸಿಟ್ಟ ಬೈಸಿಕಲ್ಲುಗಳನ್ನು ನೋಡಿ ವರದಿ ಮಾಡಿದಾಗಲೇ ಮಕ್ಕಳು ಒಳನುಗ್ಗಿರುವ ವಿಷಯ ಗೊತ್ತಾಗಿದ್ದು. ಹಳ್ಳ ದಿನ್ನೆಗಳಿದ್ದ ಹತ್ತು ಕಿಮೀ ಎತ್ತರದ ಪರ್ವತಶ್ರೇಣಿ ಅದು. ಪ್ರಮುಖವಾಗಿ ಸುಣ್ಣದ ಶಿಲೆಗಳನ್ನು ಹೊಂದಿದೆ. ಸಂಜೆ ಮನೆಗೆ ಮರಳದ ಮಕ್ಕಳ ಬಗ್ಗೆ ಹೆತ್ತವರೂ ದೂರು ಸಲ್ಲಿಸಿದಾಗ ಸುದ್ದಿ ಎಲ್ಲೆಡೆ ಹಬ್ಬಿತು. ದೇಶದ ವಿಶೇಷ ನೌಕಾಪಡೆಯ ಸೈನಿಕರು ಧಾವಿಸಿ ಬಂದಾಗ ಆಗಲೇ ಒಂದು ರಾತ್ರಿ ಕಳೆದಿತ್ತು. ಹೊರಗೆ ಮಳೆ ಜೋರಾಗಿ ಸುರಿದಂತೆ ಬೆಟ್ಟದ ನೆಲದಲ್ಲಿ ಇಂಗಿದ, ಸೀಳುಗಳಿಂದ ಕೆಳಗಿಳಿದ ನೀರು ಸುರಂಗವನ್ನೇ ನದಿಪಾತ್ರವಾಗಿಸಿ ಓಡತೊಡಗಿತ್ತು.

ಸಮೀಪದ ಚಿರಾಂಗ್* ನ ಗವರ್ನರ್ ಮುಖಂಡತ್ವ ವಹಿಸಿದರು. ಥಾಯಿ ವಿಶೇಷ ದಳ SEAL ದ ಆಯ್ದ ಸೈನಿಕರನ್ನು ಒಟ್ಟಾಗಿಸಿ 'ರಕ್ಷಣಾ ಪಡೆ' ಘೋಷಿಸಲಾಯಿತು. ರಕ್ಷಣಾ ಪಡೆಯ ನೇತೃತ್ವದಲ್ಲಿ ಮುಂದೆ ಎಂಟು ದಿನಗಳ ಕಾಲ ದೇಶವಿದೇಶಗಳ ನುರಿತ ಮುಳುಗುತಜ್ಞರು (divers) ಸುರಂಗದೊಳಕ್ಕೆ